ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 2986/2022

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ತೆಕ್ಕಲಕೋಟೆ ಪೊಲೀಸ್ ಠಾಣೆ.

-ವಿರುದ್ಧ-

ಆರೋಪಿತರು ಃ

ಎ1) ಯಂಕಪ್ಪ ಬಿನ್ ದಿಃ ಸಿದ್ದಯ್ಯ, ವಃ 50 ವರ್ಷ,
ಎ2) ಲಕ್ಷ್ಮೀಕಾಂತ ಬಿನ್ ಯಂಕಪ್ಪ, ವಃ 36 ವರ್ಷ,

ಇಬ್ಬರ ವಾಸಃ 13 ನೇ ವಾರ್ಡ್, ತೆಕ್ಕಲಕೋಟೆ ಟೌನ್,
ಸಿರುಗುಪ್ಪ ತಾಃ ಬಳ್ಳಾರಿ ಜಿಃ

<u>ದೋಷಾರೋಪಣೆ</u>

ನಾನು ಅಶೋಕ್ ಆರ್.ಹೆಚ್., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿರುಗುಪ್ಪ ಈ ಮೂಲಕ ನಿಮ್ಮ ಮೇಲೆ ಹೊರೆಸುವ ಆರೋಪಣೆ ಏನೆಂದರೆಃ

ದಿನಾಂಕ **04.07.2022** ರಂದು ಸಂಜೆ **6.00** ಗಂಟೆ ಸುಮಾರಿಗೆ ತೆಕ್ಕಲಕೋಟೆ ಪೋಲಿಸ್ ಠಾಣಾ ಸರಹದ್ದಿನಲ್ಲಿರುವ ತೆಕ್ಕಲಕೋಟೆ ಪಟ್ಟಣದ **18** ನೇ ವಾರ್ಡಿನಲ್ಲಿರುವ ಪಿರ್ಯಾದಿದಾರರ ಮನೆಯ ಮುಂದೆ ಚಾಸಾ-**1** ರಿಂದ **3** ರವರು ಕುಳಿತುಕೊಂಡಿದ್ದಾಗ **1** ಮತ್ತು **2** ನೇ ಆರೋಪಿತರಾದ ನೀವುಗಳು ಏಕಾಏಕಿ ಬಂದವರೇ ನಿಮ್ಮಗಳ ಪೈಕಿ **1** ನೇ ಆರೋಪಿಯು ಚಾಸಾ-**1** ರವರಿಗೆ ಲೇ ಸೂಳೇ ಮಗನೇ ನಮ್ಮ ತಾಯಿಯವರು ತೀರಿಕೊಂಡಾಗ ಮಾಡಿದ ಖರ್ಚಿನ ಹಣವನ್ನು ಕೊಡು ಎಂದು ಕೇಳಿದರೆ ಕೊಡುತ್ತೇನೆಂದು ಹೇಳಿ ಕಾಲಕಳೆಯುತ್ತೀಯಾ ಎಂದಿದ್ದು, ಅದಕ್ಕೆ ಚಾಸಾ-**1** ರವರು ತಮ್ಮ ಹತ್ತಿರ ಹಣ ಇಲ್ಲ ಸ್ವಲ್ಪ ದಿನ ಸಮಯ ಕೊಡು ಸಾಲ ತಂದು ತೀರಿಸುತ್ತೇನೆಂದು ತಿಳಿಸಿದ್ದಾಗ್ಯೂ ಅದಕ್ಕೆ **2** ನೇ ಆರೋಪಿಯು ಈ ಸೂಳೇ ಮಗನನ್ನು ಏಕೆ ಕೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಮಾಡಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಃ ಉದ್ರೇಕದಿಂದ ಅವರು ಶಾಂತಿ ಭಂಗವನ್ನುಂಟು ಮಾಡಲೆಂಬ ಅಥವಾ ಇತರೆ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ದುರ್ಭಾಷೆಗಳಿಂದ ಬೈದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **504** ಸಹವಾಚಕ ಕಲಂ **34** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಸಮಾನ ಉದ್ದೇಶ ಹೊಂದಿದ ಆರೋಪಿತರಾದ ನಿಮ್ಮಗಳ ಪೈಕಿ **2** ನೇ ಆರೋಪಿಯು ಈ ಸೂಳೇ ಮಗನನ್ನು ಏಕೆ ಕೇಳುತ್ತೀಯಾ ಎಂದು ಅಲ್ಲೆ ಇದ್ದ ಕಲ್ಲನ್ನು ತೆಗೆದುಕೊಂಡು ಚಾಸಾ-**1** ರವರ ತಲಗೆ ಹೊಡೆದು ಸಾದಾ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **324** ಸಹವಾಚಕ ಕಲಂ **34** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಸಮಾನ ಉದ್ದೇಶ ಹೊಂದಿದ ಆರೋಪಿತರಾದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಚಾಸಾ-1 ರವರನ್ನು ಹಿಡಿದು ಎಳೆದಾಡಿ ಕೈಯಿಂದ ಕಪಾಳಕ್ಕೆ ಹೊಡೆದಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **323** ಸಹವಾಚಕ

ಕಲಂ **34** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಸಮಾನ ಉದ್ದೇಶ ಹೊಂದಿದ ಆರೋಪಿತರಾದ ನೀವು ಇಬ್ಬರೂ ಸೇರಿ ಚಾಸಾ-1 ರವರಿಗೆ ಇನ್ನೊಂದು ಸಾರಿ ನೀನೇನಾದರೂ ನಮ್ಮ ತಂಟೆಗೆ ಬಂದರೆ ನಿನ್ನನ್ನು ಪ್ರಾಣಸಹಿತ ಉಳಿಸುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು, ಭಾ.ದಂ.ಸಂ.ಕಲಂ.**506** ಸಹವಾಚಕ ಕಲಂ **34** ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

(ಅಶೋಕ್ ಆರ್.ಹೆಚ್.)

**ದಿನಾಂಕ:** 23.06.2026

ಪ್ರ.ದ.ನ್ಯಾದಂ., ಸಿರುಗುಪ್ಪ.

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 2986/2022

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್
ಪೊಲೀಸ್, ತೆಕ್ಕಲಕೋಟೆ ಪೊಲೀಸ್ ಠಾಣೆ.

-ವಿರುದ್ಧ–

**ಆರೋಪಿತರು** ಃ

**ಆರೋಪಣೆ**

ಪ್ರಶ್ನೆ ಃ **ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?**

ಉತ್ತರಃ

ಪ್ರಶ್ನೆ ಃ **ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ?**

ಉತ್ತರಃ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದರಿ ಆರೋಪಿತರಿಂದ ಪಡೆದಿದ್ದು, ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).

**ದಿನಾಂಕಃ** 23.06.2026. **ಪ್ರ. ದ. ನ್ಯಾ. ದಂ., ಸಿರುಗುಪ್ಪ.**